# ರಾಜ್ಯ ಒಕ್ಕಲಿಗರ ಸಂಘ

ಕೃ. ರಾ. ರಸ್ತೆ, ಬೆಂಗಳೂರು 560004.

**ನಂ.ರಾಒಸ: ಆಡಳಿತ/1213/2024–25** **ದಿನಾಂಕ: 22–10–2024**

## ಪತ್ರಿಕಾ ಪ್ರಕಟಣೆ

ವಿಷಯ : ದಿನಾಂಕ: 30–10–2024ರ ಬುಧವಾರ ಬೆಳಗ್ಗೆ 11:00 ಗಂಟೆಗೆ ನಡೆಯಲಿರುವ ನೂತನ ಪದಾಧಿಕಾರಿಗಳ ಆಯ್ಕೆಗಾಗಿ ಸಭೆ.

ಉಲ್ಲೇಖ : ದಿನಾಂಕ: 22–10–2024ರ ಮಂಗಳವಾರದಂದು ನಡೆದ ಅವಿಶ್ವಾಸ ನಿರ್ಣಯದ ಸಭಾ ತೀರ್ಮಾನ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ: 22–10–2024ರ ಮಂಗಳವಾರದಂದು ಬೆಳಗ್ಗೆ 11:00 ಗಂಟೆಗೆ ರಾಜ್ಯ ಒಕ್ಕಲಿಗರ ಸಂಘದ ಆಡಳಿತ ಭವನದ ಎರಡನೇ ಮಹಡಿಯಲ್ಲಿರುವ ಸಭಾಂಗಣದಲ್ಲಿ ನಡೆದ ಅವಿಶ್ವಾಸ ನಿರ್ಣಯ ಸಭೆಯ ನಡವಳಿಯಂತೆ ಇನ್ನುಳಿದ ಅವಧಿಗೆ ಸಂಘದ ಪದಾಧಿಕಾರಿಗಳ ಆಯ್ಕೆಗಾಗಿ ಕಾರ್ಯಕಾರಿ ಸಮಿತಿ ಸಭೆಯನ್ನು ದಿನಾಂಕ: 30–10–2024 ರ ಬುಧವಾರ ಬೆಳಗ್ಗೆ 11:00 ಗಂಟೆಗೆ ರಾಜ್ಯ ಒಕ್ಕಲಿಗರ ಸಂಘದ ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯದ (ಬಿ.ಐ.ಟಿ) 6ನೇ ಮಹಡಿಯ ಎಂ.ಬಿ.ಎ ಸೆಮಿನಾರ್ ಹಾಲ್‌ನಲ್ಲಿ ಏರ್ಪಡಿಸಲಾಗಿದೆ. ಎಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರುಗಳು ಸಭೆಗೆ ಆಗಮಿಸಬೇಕಾಗಿ ಕೋರಿದೆ.

ರಾಜ್ಯ ಒಕ್ಕಲಿಗರ ಸಂಘದ ಪದಾಧಿಕಾರಿಗಳ ಚುನಾವಣೆಯಲ್ಲಿ ಸ್ಪರ್ಧಿಸಲಿಚ್ಛಿಸುವವರು ಈ ಕೆಳಗೆ ನಮೂದಿಸಿರುವ ವೇಳಾಪಟ್ಟಿಯಂತೆ ನಾಮಪತ್ರವನ್ನು ಸಲ್ಲಿಸಬಹುದು. ನಾಮಪತ್ರವನ್ನು ಚುನಾವಣಾ ದಿನಾಂಕದಂದು ಹಂಗಾಮಿ ಪ್ರಧಾನ ಕಾರ್ಯದರ್ಶಿ (ಅಶೋಕ್ ಎಸ್.ಡಿ. ಜಯರಾಮ್)ರವರಿಂದ ಪಡೆಯಬಹುದಾಗಿರುತ್ತದೆ.

**ರಾಜ್ಯ ಒಕ್ಕಲಿಗರ ಸಂಘದ ಇನ್ನುಳಿದ ಅವಧಿಗೆ ಆಯ್ಕೆ ಮಾಡಬೇಕಾದ ಪದಾಧಿಕಾರಿಗಳ ಸ್ಥಾನಗಳ ವಿವರ:–(1) ಅಧ್ಯಕ್ಷರು, (2) ಉಪಾಧ್ಯಕ್ಷ 2 ಸ್ಥಾನಗಳು, (3) ಪ್ರಧಾನ ಕಾರ್ಯದರ್ಶಿ, (4) ಸಹಾಯಕ ಕಾರ್ಯದರ್ಶಿ, (5) ಖಜಾಂಚಿ**

### ಚುನಾವಣಾ ವೇಳಾಪಟ್ಟಿ

| | | |
|---|---|---|
| 1. | ನಾಮಪತ್ರಗಳ ಸಲ್ಲಿಕೆ. | ದಿನಾಂಕ: 30–10–2024 ರ ಬೆಳಗ್ಗೆ 11:00 ರಿಂದ 12:00 ಘಂಟೆಯವರೆಗೆ. |
| 2. | ನಾಮಪತ್ರಗಳ ಪರಿಶೀಲನೆ. | ದಿನಾಂಕ: 30–10–2024 ರ ಬೆಳಗ್ಗೆ 12:00 ರಿಂದ ಮಧ್ಯಾಹ್ನ 12:30 ಘಂಟೆಯವರೆಗೆ. |
| 3. | ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ. | ದಿನಾಂಕ: 30–10–2024 ರ ಮಧ್ಯಾಹ್ನ 12:45 ಘಂಟೆಗೆ. |
| 4. | ನಾಮಪತ್ರ ಹಿಂಪಡೆಯುವುದು. | ದಿನಾಂಕ: 30–10–2024 ರ ಮಧ್ಯಾಹ್ನ 12:45 ರಿಂದ 1:00 ಘಂಟೆಯವರೆಗೆ. |
| 5. | ಅಭ್ಯರ್ಥಿಗಳ ಅಂತಿಮ ಪಟ್ಟಿ ಪ್ರಕಟಣೆ. | ದಿನಾಂಕ: 30–10–2024 ರಂದು ಮಧ್ಯಾಹ್ನ 1:00 ರಿಂದ 1:15 ಘಂಟೆಯವರೆಗೆ. |
| 6. | ಮತ ಚಲಾವಣೆ (ಅವಶ್ಯಕತೆ ಇದ್ದರೆ) | ದಿನಾಂಕ: 30–10–2024 ರ ಮಧ್ಯಾಹ್ನ 1:15 ರಿಂದ 2:00 ಘಂಟೆಯವರೆಗೆ. |
| 7. | ಮತಗಳ ಎಣಿಕೆ. | ದಿನಾಂಕ: 30–10–2024 ರಂದು ಮತದಾನ ಮುಗಿದ ನಂತರ. |
| 8. | ಫಲಿತಾಂಶ ಪ್ರಕಟಣೆ. | ದಿನಾಂಕ: 30–10–2024 ರಂದು ಮತ ಎಣಿಕೆ ಮುಗಿದ ನಂತರ. |

ಸಹಿ/–

**(ಅಶೋಕ್ ಎಸ್.ಡಿ. ಜಯರಾಮ್)**

ಹಂಗಾಮಿ ಪ್ರಧಾನ ಕಾರ್ಯದರ್ಶಿ, ರಾಜ್ಯ ಒಕ್ಕಲಿಗರ ಸಂಘ